ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 04.04.2025.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಡಿ.ಹೆಚ್.ಹಚ್. ವಕೀಲರಿಂದಃ**

ನನ್ನ ತಂದೆಗೆ ಮೂರು ಜನ ಹೆಂಡತಿಯರು ಇದ್ದರು. ಮೊದಲನೇ ಹೆಂಡತಿ ಹೆಸರು ನನಗೆ ಗೊತ್ತಿಲ್ಲ, 2ನೇ ಹೆಂಡತಿ ಹೆಸರು ಗೋದಾವರಿ ಇರುತ್ತದೆ, 3ನೇ ಹೆಂಡತಿ ಹೆಸರು ಸಂಗಮ್ಮ ಇರುತ್ತದೆ. ಈಗ ಸಂಗಮ್ಮ ಜೀವಂತ ಇರುತ್ತಾಳೆ. ನನ್ನ ತಂದೆ ಊರು ದೇವಗಾವ್ ಗ್ರಾಮ. ಸದರಿ ದೇವಗಾವ್ ಗ್ರಾಮದಲ್ಲಿ ನನ್ನ ಅಜ್ಜನಿಂದ ಬಂದಂತಹ 5 ಮನೆಗಳು ಇರುತ್ತದೆ. ಆ ಪೈಕಿ ಸದರಿ 5 ಮನೆಗಳು ಎಲ್ಲವು ಕಟ್ಟಿದ್ದು ಆಗಿರುತ್ತವೆ, ಆದರೆ ಈಗ ಮೂರು ಮನೆಗಳು ಬಿದ್ದಿರುತ್ತವೆ. ಸದರಿ ಉಳಿದ ಎರಡು ಮನೆಗಳ ಪಂಚಾಯತಿ ನಂಬರ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ಎರಡು ಮನೆಗಳ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಬಿದ್ದಿರುವ ಮೂರು ಮನೆಗಳ ಉದ್ದ-ಅಗಲ ನನಗೆ ಗೊತ್ತಿಲ್ಲ. ಸದರಿ 5 ಮನೆಗಳಿಗೆ ಸಂಂಬಧಪಟ್ಟಂತೆ ಅವುಗಳನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ಸದರಿ 5 ಮನೆಗಳ ಪಂಚಾಯತಿ ನಂಬರ ಹಾಗೂ ವಿಸ್ತೀರ್ಣ ದಾವೆಯಲ್ಲಿ ತೋರಿಸಿರುತ್ತೇನೆ. ನಾನು ಮೇಲೆ ಹೇಳಿದ 5 ಮನೆಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ 5 ಮನೆಗಳನ್ನು ಸೇರಿಸದೇ ಇದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**